# ಬಂಧನ– ಬಿಡುಗಡೆ

ಬುದ್ಧನ ದಾರಿ ಬೆಳಕಿನ ದಾರಿ. ಎಂತಹ ಕಾರಿರುಳನ್ನೂ ಬೆಳಕಾಗಿ ಪರಿವರ್ತಿಸುವ ವಿಸ್ಮಯದ ದಾರಿ. ಬುದ್ಧನನ್ನು ಪರೀಕ್ಷಿಸಲೆಂದು ಬಂದವರು. ಬುದ್ಧನನ್ನು ಅಪನಂಬಿಕೆಯಿಂದ ಕಂಡವರು ಅರಿವಿಲ್ಲದೆಯೇ ಅವನತ್ತ ಸೆಳೆಯಲ್ಪಡುತ್ತಿದ್ದರು. ಬುದ್ಧನೆಂದರೆ ನಂಬಿಕೆ, ಬುದ್ಧನೆಂದರೆ ಆತ್ಮವಿಶ್ವಾಸ. ಈ ರೀತಿಯ ಭಾವನೆ ಬುದ್ಧನ ಬಗ್ಗೆ ಚಾಲ್ತಿಯಲ್ಲಿತ್ತು. ಎಲ್ಲರನ್ನೂ ತನ್ನೆಡೆಗೆ ಸೆಳೆಯಬಲ್ಲ. ನೆಮ್ಮದಿ ನೀಡಬಲ್ಲ ಅವನ ತಾಯ್ತನವೇ ಇದಕ್ಕೆ ಕಾರಣವಾಗಿತ್ತು. ಬುದ್ಧನೆಡೆಗೆ ಜನ ಧಾವಿಸಿ ಬರುತ್ತಿದ್ದಾಗ ಬುದ್ಧ ಕೇವಲ ಪುರುಷರಿಗೆ ಮಾತ್ರ ಬೌದ್ಧ ಸಂಘಕ್ಕೆ ಸೇರಲು ಅನುಮತಿ ನೀಡುತ್ತಿದ್ದ. ಮಹಿಳೆಯರ ಬಗ್ಗೆ ಉತ್ಸಾಹ ತೋರುತ್ತಿರಲಿಲ್ಲ.

ಮಹಿಳೆಯರಿಗೂ ಈ ಸಂಘ ಸೇರುವ ಉತ್ಸಾಹ ಇತ್ತು. ಅವರು ಪ್ರಜಾಪತಿ ಗೌತಮಿಯ (ಬುದ್ಧನ ಸಾಕು ತಾಯಿ) ನಾಯಕತ್ವದಲ್ಲಿ ಮತ್ತೆ ಮತ್ತೆ ಸೇರಲು ಪ್ರಯತ್ನಿಸುತ್ತಾರೆ. ಆದರೆ ಸಾಧ್ಯವಾಗುವುದಿಲ್ಲ. ಬುದ್ಧ ತನ್ನ ಅನುಯಾಯಿಗಳೊಂದಿಗೆ 'ನಿಗ್ರೊ ಧರಮ'ದಲ್ಲಿ ತಂಗಿದ್ದಾಗ ಗೌತಮಿ ಅಲ್ಲಿಗೆ ತೆರಳಿ 'ಬೌದ್ಧ ಸಂಘದಿಂದ ಪ್ರಕಟಗೊಂಡ ತತ್ವದ ಆಧಾರ ಮತ್ತು ಶಿಸ್ತಿನ ನಡವಳಿಕೆಗಳಿಂದ ಕೂಡಿದ ಸ್ತ್ರೀ ಭಿಕ್ಕುಗಳನ್ನು ಸಂಘಕ್ಕೆ ಸೇರಿಸಿಕೋ' ಎಂದು ವಿನಂತಿಸುತ್ತಾಳೆ. ಬುದ್ಧ 'ಈ ಬಗೆಯ ಯೋಚನೆಗಳು ನಿಮ್ಮ ಮನದಲ್ಲಿ ಸುಳಿಯದಿರಲಿ' ಎಂದು ನಿರಾಕರಿಸುತ್ತಾನೆ. ದುಃಖಿತಳಾದ ಗೌತಮಿ ಅವನಿಗೆ ವಂದಿಸಿ ಹೊರಟು ಹೋಗುತ್ತಾಳೆ. ವಿಶೇಷವಾಗಿ ಶಾಕ್ಯಕುಲದ ಈ ಮಹಿಳೆಯರು ಮರಳಿ ಪ್ರಯತ್ನ ಮಾಡಲು ನಿರ್ಧರಿಸುತ್ತಾರೆ. ಎಲ್ಲರೂ ಭಿಕ್ಕುಗಳ ವೇಷ ಧರಿಸುತ್ತಾರೆ. ಗೌತಮಿ ತನ್ನ ತಲೆ ಕೂದಲು ತೆಗೆಸಿ ಭಿಕ್ಕುಗಳ ಕಿತ್ತಲೆ ಬಣ್ಣದ ವಸ್ತ್ರಧರಿಸಿ, ಶಕ್ಯನರ ಬುಡಕಟ್ಟು ಹೆಣ್ಣು ಮಕ್ಕಳೊಂದಿಗೆ ಬುದ್ಧ ತಂಗಿದ್ದ ವೈಶಾಲಿಯ 'ಕುತಗರ' ಎಂಬ ಆಲಯದ ಸ್ಥಳಕ್ಕೆ ಬರುತ್ತಾಳೆ. ಹಿಂದೆ 'ನಿಗ್ರೊ ಧರಮ'ದಲ್ಲಿ ಬುದ್ಧನನ್ನು ಪ್ರಶ್ನಿಸಿದಂತೆಯೇ ಪ್ರಶ್ನಿಸಿ ನಿರಾಕರಿಸಲ್ಪಡುತ್ತಾಳೆ. ನಿರಾಶಳಾದ ಗೌತಮಿ ಆಲಯದ ಪ್ರವೇಶ ದ್ವಾರದಲ್ಲಿ ದುಃಖಿತಳಾಗಿ ನಿಂತಿರುತ್ತಾಳೆ.

ಆಕೆಯ ಕಾಲು ಊದಿ ಧೂಳಿನಿಂದ ತುಂಬಿಕೊಂಡಿತ್ತು. ಹೀಗೇಕೆ ಸೊರಗಿದ್ದೀರೆಂದು ಆನಂದ (ಬುದ್ಧನ ಶಿಷ್ಯ) ಪ್ರಶ್ನಿಸುತ್ತಾನೆ. ಗೌತಮಿ ಸಂಘ ಪ್ರವೇಶ ಕುರಿತು ಬುದ್ಧನ ನಿರಾಕರಣೆಯನ್ನು ತಿಳಿಸುತ್ತಾಳೆ. ಸ್ವತಃ ಆನಂದ ತಾನೇ ಬುದ್ಧನಲ್ಲಿಗೆ ಹೋಗಿ 'ಈ ಮಹಿಳೆಯರು ದೂರದಿಂದ ನಡೆದು ಬಂದು ಆಯಾಸಗೊಂಡಿದ್ದಾರೆ.ತಮ್ಮ ಮನೆಯನ್ನು ತ್ಯಜಿಸಿ ತತ್ವಾಧಾರಿತ ನಿಯಮಗಳನ್ನು ಪಾಲಿಸುತ್ತ ಸಂಘ ಸೇರಲು ಅನುಮತಿ ಕೇಳುತ್ತಿದ್ದಾರೆ. ತತ್ವಗಳನ್ನು ಪಾಲಿಸುತ್ತಲೇ ಸಂಘ ಸೇರಲು ಅನುಮತಿ ನೀಡುವುದು ಉತ್ತಮ. ಅಲ್ಲದೆ ಗೌತಮಿ ನಿನ್ನನ್ನು ಪೋಷಿಸಿದ ತಾಯಿಯಲ್ಲವೇ. ನಿನ್ನ ತಾಯಿಯ ಮರಣದ ನಂತರ ಹಾಲೂಡಿಸಿ, ದಾದಿಯಾಗಿ ನಿಮ್ಮನ್ನು ಸಲಹಿದವಳಲ್ಲವೇ. ತಾವೇ ಹೇಳಿರುವಂತೆ ಮನೆಯನ್ನು ತೊರೆದು ಸಂಘದ ತತ್ವಗಳನ್ನು ಪಾಲಿಸಲು ಸಿದ್ಧವಿರುವವರಿಗೆ ಅನುಮತಿ ನೀಡುವುದು ಒಳ್ಳೆಯದಲ್ಲವೇ' ಎಂದು ಪರಿಪರಿಯಾಗಿ ಪ್ರಶ್ನಿಸುತ್ತಾನೆ.

ಬುದ್ಧ 'ಸಾಕು ಆನಂದ, ಮಹಿಳೆಯರಿಗೆ ಪ್ರವೇಶ ನೀಡುವುದು ಸಲ್ಲದು' ಎಂದು ನಿರಾಕರಿಸುತ್ತಾನೆ. ಆನಂದ ಎರಡುಮೂರು ಬಾರಿ ಪ್ರಶ್ನಿಸಿ ಇದೇ ಉತ್ತರ ಪಡೆಯುತ್ತಾನೆ. ಕೊನೆಗೆ ಆನಂದ 'ನೀವು ಯಾವ ದೃಷ್ಟಿಯಿಂದ ಪ್ರವೇಶ ನೀಡಲು ನಿರಾಕರಿಸುವಿರಿ ವೈದಿಕರು– ಶೂದ್ರರು, ಸ್ತ್ರೀಯರು ಹಾಗೂ ಕೆಳವರ್ಗದವರನ್ನು ಮೋಕ್ಷ ಸಾಧನೆಗೆ ಅನರ್ಹರೆಂದು ನಿರ್ಧರಿಸಿದ್ದಾರೆ. ತಾವೂ ಸಹ ಇದೇ ಕಾರಣದಿಂದಾಗಿ ಪ್ರವೇಶ ನಿರಾಕರಿಸುವಿರಾ?' ಮುಂದುವರೆದು 'ಮಹಿಳೆಯರು ನಿರ್ವಾಣ ಪಡೆಯಲು ಅಶಕ್ತರೆಂದು ಭಾವಿಸುವಿರಾ' ಎನ್ನುತ್ತಾನೆ.

ಆಗ ಬುದ್ಧ 'ಮಹಿಳೆಯರು ಪುರುಷರಷ್ಟೇ ಸಂಘಕ್ಕೆ ಸೇರಲು ಅರ್ಹರಿದ್ದಾರೆ. ನಾನು ಲಿಂಗಭೇದವನ್ನಾಗಲೀ ಅಸಮಾನತೆಯನ್ನಾಗಲೀ ಮಾಡುತ್ತಿಲ್ಲ. ಮಹಿಳೆಯರಿಗೆ ನಿಜಾನುಭವಿಕ ಪ್ರಯೋಗಗಳು ಸಾಧ್ಯವಿಲ್ಲವೆಂಬ ಕಾರಣಕ್ಕಾಗಿ ವಿರೋಧಿಸುತ್ತಿದ್ದೇನೆ' ಎನ್ನುತ್ತಾನೆ. ಬುದ್ಧನ ಪ್ರಿಯ ಶಿಷ್ಯನೂ, ಸಂಘದ ಕಟ್ಟಾಳುವೂ ಆಗಿದ್ದ ಆನಂದ 'ಇಂತಹ ತೀರ್ಮಾನಗಳು ನಮ್ಮ ಧರ್ಮಕ್ಕೆ ಅಪಖ್ಯಾತಿ ತರುವುದಿಲ್ಲವೇ? ಇದು ಲಿಂಗಭೇದದ ಅಸಮಾನತೆಯ ಆಚರಣೆಗೆ ಪ್ರೋತ್ಸಾಹವೆಂದು ಜನರು ಪ್ರಶ್ನಿಸುವುದಿಲ್ಲವೇ? ಬೌದ್ಧ ಜೀವನ ಕ್ರಮದ ಆಚರಣೆಯಲ್ಲಿರುವ ತೊಂದರೆಗೆ ನಿವಾರಣೆಗಳು ಇಲ್ಲವೇ? ನಿಮಗೆ ಕಳವಳ ಮಾಡಿರುವ ಈ ಸಮಸ್ಯೆಗೆ ಪರಿಹಾರವಿಲ್ಲವೇ?' ಎಂದು ಪ್ರಶ್ನಿಸುತ್ತಾನೆ. ಅವನ ವಿವೇಚನೆಯ ಮಾತುಗಳಿಗೆ ಮಣಿದ ಬುದ್ಧ 'ನನ್ನ ಸಿದ್ಧಾಂತ, ನಿಯಮಗಳಂತೆ ಅವರು ಭಿಕ್ಕು ಆಗಬಹುದು. ಆದರೆ ಧರ್ಮದ ಅಷ್ಟಾನಿಬಂಧನೆಗಳನ್ನು ಪಾಲಿಸಲೇಬೇಕು. ಇದರ ಜವಾಬ್ದಾರಿಯನ್ನು ಗೌತಮಿ ವಹಿಸಿಕೊಳ್ಳಲಿ' ಎಂದು ಹೇಳುತ್ತಾನೆ. ಸ್ವತಃ ಆನಂದನೇ ಈ ನಿಬಂಧನೆಗಳನ್ನು ಬುದ್ಧನಿಂದ ಕಲಿತು ಗೌತಮಿ ಮತ್ತು ಇತರರಿಗೆ ಉಪದೇಶಿಸುತ್ತಾನೆ. ಗೌತಮಿ ಈ ನಿಬಂಧನೆಗಳನ್ನು ಮೀರದೆ ಇತರರೊಂದಿಗೆ ಬೌದ್ಧ ಸಂಘಕ್ಕೆ ನಿಷ್ಠರಾಗಿ ನಡೆದುಕೊಳ್ಳುವ ತೀರ್ಮಾನ ತೆಗೆದುಕೊಳ್ಳುತ್ತಾಳೆ.

ಗೌತಮಿ ಜತೆ 500 ಮಹಿಳೆಯರು ಬೌದ್ಧ ಧರ್ಮದ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ಸಂಭ್ರಮದಿಂದ ಅಪಾರ ಸಂಖ್ಯೆಯ ಮಹಿಳೆಯರು ಮೊದಲ ಬಾರಿಗೆ ಧರ್ಮದೀಕ್ಷೆ, ಆಚರಣೆ ಕುರಿತಾದ ಸ್ವಾತಂತ್ರ್ಯ ಪಡೆಯುತ್ತಾರೆ. ಮುಂದೆ ಬೌದ್ಧಪಂಥದಲ್ಲಿ ಬರುವ ಪ್ರಸಿದ್ಧ ಮಹಿಳೆಯರಾದ ಅಮ್ರಪಾಲಿ, ಬುದ್ಧನ ಹೆಂಡತಿ ಯಶೋಧರೆ, ಕುಂಡಲಕೇಸಾ ಮುಂತಾದವರೆಲ್ಲರೂ ಈ ಧರ್ಮಕ್ಕೆ ಸೇರ್ಪಡೆಯಾಗುತ್ತಾರೆ. ಬಂಧನದಿಂದ ಬಿಡುಗಡೆಯೆಡೆಗೆ ಸಾಗಿದ ಪುರುಷರಂತೆಯೇ ಮನೆಮಠಗಳಿಗೆ ಬಂಧಿಯಾಗದೆ ಧಾರ್ಮಿಕ ಸಾಧನೆಗಳೆಡೆಗೆ ಸಾಗಿದ ಮಹಾಪರ್ವವೊಂದು ಈ ರೀತಿ ಆರಂಭವಾಗುತ್ತದೆ. ಬಂಧನ ಬಿಡುಗಡೆಯ ಸಾಧ್ಯತೆಯಾಗುವುದು, ಬಿಡುಗಡೆಯ ಹಂಬಲವೇ ಬಂಧನವಾಗುವುದು ಚರಿತ್ರೆಯ ಸಂಕಟದ ಕ್ಷಣಗಳಲ್ಲಿ ಮಾತ್ರ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಜೀವಿಸುವವರಿಗೆ 'ಬಂಧನ–ಬಿಡುಗಡೆ'ಗಳೆಂಬ ಕಲ್ಪನೆಗಳು ಸವಾಲುಗಳೇ ಅಲ್ಲ. ಹೊಸ ಕಾಲದ ತುಡಿತಗಳಿಗೆ ಸ್ಪಂದಿಸುವರಿಗೆ, ಹೊಸ ಅರಿವಿನಿಂದ ಬದುಕು ಬಯಸುವವರಿಗೆ ಈ ಕಲ್ಪನೆಗಳು ಬಿಡುಗಡೆಯೂ ಹೌದು, ಬಂಧನವೂ ಹೌದು.

■ **ಅಮೃತಮತಿ**

## ಮಾತೇ ಮುತ್ತು

- ಶಾಂತ ಸ್ವಭಾವ ಯಾರಲ್ಲಿ ಇರುವುದಿಲ್ಲವೋ ಅವರು ಸುಖದಿಂದ ಇರಲು ಸಾಧ್ಯವಿಲ್ಲ.
  —ಟ್ರೆಡನ್
- ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್
- ಪ್ರೀತಿ ಇದ್ದಲ್ಲಿ ಎಲ್ಲರೂ ನಮ್ಮವರೇ.
  —ಸ್ವಾಮಿ ವಿವೇಕಾನಂದ
- ವಿಚಾರಮಾಡುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವೇ ಪ್ರಜಾತಂತ್ರದ ಉಸಿರು.
  —ಎಮರ್ಸನ್
- ನಾವು ಹಿಡಿಯುವ ದಾರಿಯಂತೆಯೇ ನಮ್ಮ ಗುರಿ ಸಹ ಇರುತ್ತದೆ. ಗುರಿಗಿಂತ ದಾರಿಯೇ ಮುಖ್ಯ.
  —ಮಹಾತ್ಮ ಗಾಂಧಿ
- ಸುಧಾರಣೆ ಒಳಗಿನಿಂದ ಬರಬೇಕೇ ಹೊರತು ಹೊರಗಿನಿಂದ ಅಲ್ಲ.
  —ಕಾರ್ಡಿನಲ್ ಗಿಬ್ಬನ್ಸ್
- ಗುರಿಯ ದೃಷ್ಟಿ ಇಲ್ಲದ ವಾದ ಎಷ್ಟೇ ತರ್ಕಬದ್ಧವಾದರೂ ಅರ್ಥಹೀನ.
  —ಲಿಯೋ ಟಾಲ್‌ಸ್ಟಾಯ್
- ಚರ್ಚೆ ಬುದ್ಧಿಯನ್ನು ಪ್ರದರ್ಶಿಸುತ್ತದೆ. ಏಕಾಂತ ಪ್ರತಿಭೆಯ ಪಾಠಶಾಲೆ.
  —ಗಿಬ್ಬನ್